ಈ ಎಲ್ಲ ಗೊಂದಲದ ತಲೆಬುಡ ಗೊತ್ತಾಗದೇ ಜಮಶೇದ – ಫ್ರೇನಿ – ಮಿಕಿ ಮಿಕಿ ನೋಡುತ್ತ ನಿಂತೇ ಉಳಿದರು. ರಾವ್‌ಜೀಭಾಯಿಗೆ ಮಾತ್ರ ನಡೆದದ್ದೇನೆಂದು ಹೊಳೆಯದೇ ಇರಲಿಲ್ಲ. ''ಕೂಡೋಣ ಅಲ್ಲವೆ? ಮತ್ತೆ ಚಹಾನೂ ಬೇಕು'' ಎಂದು ಜಾಧವ ಸೂಚಿಸಿದಾಗ ಎಲ್ಲರೂ ಸೋಫಾಗಳಲ್ಲಿ ಕುಳಿತುಕೊಂಡರು. ಧೋಂಡೂ ಚಹದ ಸಂದೇಶವನ್ನು ಮುಟ್ಟಿಸಲು ಪಾರ್ವತಿಯನ್ನು ಹುಡುಕಿ ಒಳಗೆ ನಡೆದ. ಆಗ ಜಾಧವನೇ ಮತ್ತೆ ಮಾತನಾಡಿದ. ಮೊದಲು ಪಾರಶೀ ದಂಪತಿಯನ್ನು ರಾವ್‌ಜೀಭಾಯಿಯ ಮಗನಿಗೆ ಪರಿಚಯಿಸಿದ ಹಾಗೂ, ''ಇವರು ಜಿತೇಂದ್ರ ಶಹ, ಈ ಹಿರಿಯರ ದೊಡ್ಡ ಮಗ, ಇವರು ಇಲ್ಲಿ ಬಂದು, ವರುಷಗಳ ಹಿಂದೆ ಕಾಣೆಯಾದ ಮಗನ ಬಗ್ಗೆ ನಿಮಗೆ ಹೇಳುತ್ತ ಕುಳಿತಾಗ ಇವರ ಮನೆಯ ಮಂದಿ ಕಾಣೆಯಾದ ಇವರನ್ನ ಊರಲ್ಲೆಲ್ಲ ಹುಡುಕುತ್ತಿದ್ದರು. ಈ ಹುಟುಕಾಟದಲ್ಲಿ ಕೊನೆಗೆ ನಾನೂ ಸೇರಿಕೊಳ್ಳಬೇಕಾಯಿತು. ನಿಮ್ಮ ಕೆಲಸದ ಮನುಷ್ಯ ಕೆಳಗೆ ಬಂದು ಹೇಳಿರದಿದ್ದರೆ ಈ ನಾಟಕ ಇನ್ನೆಷ್ಟು ಹೊತ್ತು ನಡೆಯುತ್ತಿತ್ತೋ! ಕಾಣೆಯಾಗುವುದು ನಿಮಗೆ ಬಹಳ ಸೇರುತ್ತದೆಯೆಂದು ತೋರುತ್ತದೆ. ಅಜ್ಜಾ ಇದೇ ಮೊದಲ ಸಾರಿಯಲ್ಲವಂತೆ! ಈ ಕಟ್ಟಡಕ್ಕೆ ಬಂದು 2 ವಾರವೂ ಆಗಿಲ್ಲ – ಆಗಲೇ ಸುರು ಮಾಡಿಯೇಬಿಟ್ಟರಲ್ಲ? ಇದು ನನ್ನ ಡ್ಯೂಟಿಯ ಸರಹದ್ದಿನಲ್ಲಿ ಬರುವ ಜನವಸತಿ ನೆನಪಿರಲಿ. ಇಲ್ಲಿ ಕಾಣೆಯಾಗುವುದು ಸುಲಭವಲ್ಲ. ಕಾಣೆಯಾಗುವುದಕ್ಕೆ ಸಕ್ತ ಮನಾಯಿಯೂ ಇದೆ ಮೇಲಾಗಿ!'' ಜಾಧವ ನಕ್ಕ. ರಾವ್‌ಜೀಭಾಯಿಗೆ ಜಾಧವ ಬಹಳ ಸೇರಿದ; ಉದ್ದ ಸರಳವಾದ ಮೂಗು, ನೀಟಾಗಿ ಕತ್ತರಿಸಿ ತಿದ್ದಿದ ಮೀಸೆಗಳು, ಮೋಹಕವಾದ ನಗು, ನಕ್ಕಾಗ ಕಾಣಿಸಿಕೊಂಡ ಸುಂದರ ದಂತಪಂಕ್ತಿಗಳು. ತಾರುಣ್ಯದ ಲವಲವಿಕೆಯೊಡನೆ ಅಧಿಕಾರದ ಸೌಮ್ಯ ದರ್ಪವನ್ನೂ ಸಾರುತ್ತ ಹೊಳಪು ಮಿಂಚುವ ಕಣ್ಣುಗಳು; ಹತ್ತಿರ ಬಂದು ಮೈದಡವಬೇಕು ಅನ್ನಿಸುವಷ್ಟು ಹುಡುಗ ಮೆಚ್ಚಿಕೆಯಾದ; ''ಹೌದೆ? ಹಾಗಾದರೆ ಇನ್ನು ಮೇಲೆ ಕಾಣೆಯಾಗಲಾರೆ. ಆದರೆ ಲಿಫ್ಟ್‌ಮನ್ನನಿಗೆ ನಾನು ಇಲ್ಲಿ ಬಂದದ್ದು ಗೊತ್ತಿತ್ತಲ್ಲ – ಅವನೇ ಬಂದು ನನ್ನನ್ನು ಇಲ್ಲಿಗೆ ಮುಟ್ಟಿಸಿದ್ದು'' ಎಂದ ರಾವ್‌ಜೀಬಾಯಿ.

''ತೊಂದರೆ ಬಂದದ್ದು ಇಲ್ಲಿಯೇ, ಅಪ್ಪ. ಎರಡು ಗಂಟೆಗೇ ಅವನ ಪಾಳಿ ಮುಗಿದಿತ್ತು. ನೀವು ಮನೆಯಲ್ಲಿ ಇಲ್ಲದ್ದು ಗೊತ್ತಾಗಿ ಕೆಳಗೆ ಬರುವಷ್ಟರಲ್ಲಿ ಬೇರೆ ಲಿಫ್ಟ್‌ಮನ್ ಕೆಲಸಕ್ಕೆ ಹಾಜರಾಗಿದ್ದ. ನೀವು ಮಾತನಾಡಿಸಿದ ಚೌಕಿದಾರ 'ಪಂಪ್‌ಹೌಸ್'ಗೆ ಹೋಗಿ ತಿರುಗಿ ಬರುವಷ್ಟರಲ್ಲಿ ನೀವು ಬೇಪತ್ತೆಯಾಗಿದ್ದಿರಂತೆ. ಮನೆಗೆ ಹೋಗಿಲ್ಲವಾದರೆ ಆ ಹುಡುಗನನ್ನು ಹುಡುಕಿ ಕಂಪೌಂಡಿನ ಹೊರಗೇ ಹೋಗಿರಬೇಕು ಎಂದೆ.'' ರಾವ್‌ಜೀಭಾಯಿಯ ಮಗ ಗೊಂದಲಕ್ಕೆ ಕಾರಣವಾದ ಸನ್ನಿವೇಶವನ್ನು ವಿವರಿಸಿದ. ರಾವ್‌ಜೀಭಾಯಿಗೆ ಆಶ್ಚರ್ಯವಾಯಿತು. ತನ್ನನ್ನು ಕೆಳಗಿಳಿಯುವಂತೆ ಮಾಡಿದ ಹುಡುಗನಿಗೂ ತನಗೂ ತಪ್ಪುಗಂಟಾದ ಬಗೆ ನೆನಪಿಗೆ ಬಂತು!

ಧೋಂಡೂ ತಂದಿರಿಸಿದ ಚಹವನ್ನು ಮುಗಿಸುವಷ್ಟರಲ್ಲಿ, ಮಾತು ಬೆಳಗಿನಿಂದಲೂ ಹೊರಗೇ ಉಳಿದ ಸೋರಾಬಜೀ ಡಾಯನಾರ ಕಡೆಗೆ ತಿರುಗಿತು. ರಾವ್‌ಜೀಭಾಯಿಯ ಮಗ ಎಲ್ಲರ ಆಭಾರ ಮನ್ನಿಸಿ ಅಪ್ಪನೊಡನೆ ಮನೆಗೆ ಹೊರಡಲು ಸಿದ್ಧವಾದಾಗ ಎಲ್ಲರೂ ಎದ್ದು ನಿಂತರು. ಜಮಶೇದ – ಫ್ರೇನಿ ಇನ್ನೊಮ್ಮೆ ಬರಲು ಆಮಂತ್ರಣವಿತ್ತು ಅವರನ್ನು ಬೀಳ್ಕೊಟ್ಟರು. ''ಮತ್ತೆ ಬಂದು ಕಾಣುತ್ತೇನೆ'' ಎಂದು ರಾವ್‌ಜೀಭಾಯಿಗೆ ನಮಸ್ಕಾರ ಮಾಡಿ, ಜಾಧವ, ಪಾರಶೀ ದಂಪತಿಯನ್ನು ಮಾತನಾಡಿಸುವ ಉದ್ದೇಶದಿಂದ ಹಿಂದೆ ಉಳಿದ.